ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ. ***98/2023***

ಸಾಕ್ಷಿಯ ಹೆಸರುಃ ಶಿವರುದ್ರಪ್ಪ ವಿ ಆರ್ ಚಾಸಾಃ 15

ಗಂಡನ ಹೆಸರುಃ ಲೇಟ್ ರುದ್ರಪ್ಪ ಪ್ರಾಸಾಃ 4

ವಯಸ್ಸುಃ 43 ವರ್ಷ

ಉದ್ಯೋಗಃ ಮುಖ್ಯ ಪೇದೆ, ಎನ್ ಆರ್ ಪುರ ಪೋಲೀಸ್ ಠಾಣೆ.

ವಾಸಃ ಎನ್ ಆರ್ ಪುರ

ದಿನಾಂಕಃ 26/02/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ

ನಾನು ಎನ್ ಆರ್ ಪುರ ಪೋಲಿಸ್ ಠಾಣೆಯಲ್ಲಿ ಜುಲೈ , 2024 ರಿಂದ ಇಲ್ಲಿಯವರೆಗೂ ಮುಖ್ಯ ಪೋಲಿಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ24/09/2022 ರಂದು ನಾನು ರಾತ್ರಿ ಠಾಣಾ ಎಸ್ ಹೆಚ್ ಒ ಕರ್ತವ್ಯದಲ್ಲಿರುವಾಗ, ರಾತ್ರಿ 12-30 ರ ಸಮಯದಲ್ಲಿ ಚಾಸಾ1 ರವರು ಠಾಣೆಗೆ ಹಾಜರಾಗಿ ನೀಡಿದ ಸ್ವತ್ತುಗಳು, ಆರೋಪಿತರು ಮತ್ತು ಮಹಜರಿನೊಂದಿಗೆ ಹಾಜರಾಗಿ ನೀಡಿದ ವರದಿಯನ್ನು ಪಡೆದುಕೊಂಡು ಠಾಣಾ ಎನ್ ಸಿ ನಂಬರ್ 112/2022 ರಲ್ಲಿ ದಾಖಲಿಸಿಕೊಂಡಿರುತ್ತೇನೆ.

ನಂತರ ಅದೇ ದಿನ ಸದರಿ ಪ್ರಕರಣ ಅಸಂಜ್ಞೇಯ ಅಪರಾಧವಾಗಿದ್ದರಿಂದ ಮಾನ್ಯ ಘನ ನ್ಯಾಯಾಲಯದ ಅನುಮತಿ ಪಡೆದುಕೊಂಡು ಜೂಜಾಡುತ್ತಿದ್ದ ಆಸಾಮಿಗಳ ವಿರುದ್ಧ ಕಲಂ 80 ಕೆಪಿ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಮಾಡಲು ಅನುಮತಿಗಾಗಿ ಘನ ನ್ಯಾಯಾಲಯದಲ್ಲಿ ಕೋರಿಕೊಂಡಿರುತ್ತೇನೆ.

ನಂತರ ಅದೇ ದಿನ ಬೆಳಿಗ್ಗೆ 10-45 ಗಂಟೆ ಸಮುಯದಲ್ಲಿ ಕೊಪ್ಪ ನ್ಯಾಯಾಲಯದಿಂದ ಪಿಸಿ 690, ದರ್ಶನ್ ರವರು ಘನ ನ್ಯಾಯಾಲಯದ ಆದೇಶದ

ಪ್ರತಿಯನ್ನು ತಂದು ಹಾಜರುಪಡಿಸಿದ ಮೇರೆಗೆ ಘನ ನ್ಯಾಯಾಲಯವು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿ ತನಿಖೆ ಮಾಡಲು ಅನುಮತಿ ನೀಡಿದ್ದರಿಂದ ಠಾಣಾ ಮೊ.64/2022 ರಲ್ಲಿ ಕಲಂ 80 ಕೆ ಪಿ ಆಕ್ಟ್ ರೀತ್ಯಾ ಪ್ರಕರಣ ದಾಖಲು ಮಾಡಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಂತರ ಅದೇ ದಿನ ಸದರಿ ಪ್ರಕರಣದಲ್ಲಿ ಅಮಾತನುಪಡಿಸಿಕೊಂಡ 52 ಇಸ್ಪೀಟ್ ಎಲೆಗಳು, 5 ಲಕ್ಷದ 140 ನಗದು ಹಣ, 3 ಬೆಡ್ ಶೀಟ್ ಗಳು 3 ಮರದ ಟೇಬಲ್ ಗಳು ಒಂದು ಪ್ಲಾಸ್ಟಿಕ್ ಬಾಕ್ಸ್ , 34 ಪ್ಲಾಸ್ಟಿಕ್ ಚೇರುಗಳು, 4 ಕಾರುಗಳು , 39 ಮೊಬೈಲ್ ಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 58/2022 ರಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ. ನಂತರ ಪ್ರಕರಣದ ಚಾಸಾ 1 ರವರು ಠಾಣೆಗೆ ಕರೆದುಕೊಂಡು ಬಂದಿದ್ದ 35 ಜನ ಆರೋಪಿಗಳಿಗೆ 41 ಸಿ ಆರ್ ಪಿ ಸಿ ರೀತ್ಯ ನೋಟಿಸ್ ಜಾರಿ ಮಾಡಿರುತ್ತೇನೆ.

ನಂತರ ಅದೇ ದಿನ ಪ್ರಕರಣದ ಸಾಕ್ಷಿದಾರರಾದ ಚಾಸಾ 2 ರಿಂದ ಚಾಸಾ 11 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ 12 ರವರಿಂದ 65 ಬಿ ಕಲಂ ದೃಡೀಕರಣ ಪಡೆದಿರುತ್ತೇನೆ.

ದಿ:26/09/2022 ರಂದು ಪ್ರಕರದಣಲ್ಲಿ ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ಚಾಸಾ14 ರವರಿಗೆ ಮನವಿ ನೀಡಿರುತ್ತೇನೆ. ಅದೇ ದಿನ ಪ್ರಕರಣದ 35 ನೇ ಆರೋಪಿಯಿಂದ ಸದರಿ ಹೋಮ್ ಸ್ಟೇಯ ಎಲ್ಲಾ ದಾಖಲಾತಿಗಳನ್ನು ತಂದು ಹಾಜರುಪಡಿಸುವಂತೆ ಸೂಚನೆ ನೀಡಿರುತ್ತೇನೆ. ನಂತರ ಅದೇ ದಿನ ಚಾಸಾ 14 ರವರು ನೀಡಿದ ವರದಿಯನ್ನು ಪಡೆದಿರುತ್ತೇನೆ.

ಅದೇ ದಿನ ಸದರಿ ಪ್ರಕರಣದ 35 ನೇ ಆರೋಪಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ದಾಖಲಾತಿಯನ್ನು ಹಾಜರುಪಡಿಸಿರುತ್ತಾರೆ. ದಿ:27/09/2022 ರಂದು ಪ್ರಕರಣದಲ್ಲಿ ಕೃತ್ಯಕ್ಕೆ ಸಂಬಂಧಿಸಿದ ಅಮಾನತುಪಡಿಸಿಕೊಂಡಿದ್ದ ಸ್ವತ್ತುಗಳನ್ನು 35 ನೇ ಆರೋಪಿಯು ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದು ಸದರಿ ನ್ಯಾಯಾಲಯದ

ಆದೇಶದ ಮೇರೆಗೆ ದಿನಾಂಕಃ29/09/2022 ರಂದು ವಾಹನ ಬಿಡುಗಡೆ ಮಹಜರನ್ನು ಜರುಗಿಸಿದ್ದು ಸದರಿ ಮಹಜರಿನ ಕಾಲಕ್ಕೆ ಕೆಎ- 19 ಎಂ ಎಚ್ 6820 ನಂಬರಿನ ನಿಸಾನ್ ಟೋರೆನೊ ಕಾರನ್ನು ಆರ್ ಸಿ ಮಾಲೀಕರಿಗೆ ಬಿಡುಗಡೆ ಮಾಡಿದ್ದು ಸದರಿ ಮಹಜರನ್ನು 8 ರಿಂದ 8-30 ವರೆಗೂ ಜರುಗಿಸಿ ಫೋಟೊ ತೆಗೆಯಲಾಗಿರುತ್ತದೆ. ಆ ಸಮಯದಲ್ಲಿ ವಿಷ್ಣು ಬಿನ್ ಅಣ್ಣಪ್ಪ ಹಾಗೂ ಶಿವಕುಮಾರ್ ಅವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿರುತ್ತೇನೆ. ಸದರಿ ದಾಖಲೆಯನ್ನು ನಿಪಿ.9 ಸಾಕ್ಷಿಯ ಸಹಿಯನ್ನು ನಿಪಿ.9 ಎ ಎಂದೂ , 2 ಫೋಟೋಗಳನ್ನು ನಿಪಿ.10 ಹಾಗೂ 11 ಎಂದು ಗುರುತಿಸಲಾಯಿತು.

ದಿಃ 30/09/2022 ರಂದು ಸ್ವತ್ತುಗಳ ಬಿಡುಗಡೆ ಮಹಜರನ್ನು ಅನಿಲ್ ಡಿಮೆಲ್ಲೋ ಹಾಗೂ ಪ್ರವೀಣ ಅವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿದ್ದು ಸದರಿ ಪ್ರಕರಣದ 3 ಮರದ ಟೇಬಲ್ ಗಳು 2 ಬ್ಲಾಂಕೆಟ್ , ಒಂದು ಬೆಡ್ ಶೀಟ್, 3-4 ಫೈಬರ್ ಚೇರುಗಳನ್ನು ಬಿಡುಗಡೆ ಮಾಡಿ ಸದರಿ ಮಹಜರನ್ನು 8 ರಿಂದ 8-30 ವರಗೂ ಜರುಗಿಸಿರುತ್ತೇನೆ. ಸದರಿ ಮಹಜರನ್ನು ನಿಪಿ12 ಸಾಕ್ಷಿಯ ಸಹಿಯನ್ನು ನಿಪಿ.12 ಎ ಎಂದೂ , 2 ಫೋಟೋಗಳನ್ನು ನಿಪಿ.13 ಹಾಗೂ 14 ಎಂದು ಗುರುತಿಸಲಾಯಿತು.

ದಿಃ03/10/2022 ರಂದು ವಾಹನ ಬಿಡುಗಡೆ ಮಹಜರನ್ನು ಜರುಗಿಸಿ ಸದರಿ ಪ್ರಕರಣದ ಕೆಎ-41 ಪಿ 6793 ರ ನಂಬರಿನ ಮಾರುತಿ ಸುಜುಕಿ ವಾಹನದ ಮಹಜರನ್ನು ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ 7 ರಿಂದ 7-20 ಜರುಗಿಸಿರುತ್ತೇನೆ. ಸದರಿ ಮಹಜರನ್ನು ನಿಪಿ.15 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.15 ಎ ಎಂದೂ, 4 ಫೋಟೋಗಳನ್ನು ನಿಪಿ.16 ರಿಂದ 19 ಎಂದು ಗುರುತಿಸಲಾಯಿತು.

ದಿಃ03/10/2022 ರಂದು ವಾಹನ ಬಿಡುಗಡೇ ಮಹಜರ್ ಕ್ರಮ ಜರುಗಿಸಿದ್ದು ಪ್ರಕರಣಕ್ಕೆ ಸಂಬಂಧಿಸಿದ ಕೆಎ-20- ಎಂ ಎ 3558 ನಂಬರಿನ ಫೋರ್ಟ್ ಎಕೋ ಸ್ಪೋರ್ಟ್ ನ ವಾಹನವನ್ನು ಅದರ ಜಿಪಿಎ ಅವರಿಗೆ ಬಿಡುಗಡೆ ಮಾಡಲು ಸಾಕ್ಷಿದಾರರಾದ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಮಹಜರನ್ನು 7-25

ರಿಂದ 7-45 ಜರುಗಿಸಿರುತ್ತೇನೆ. ಸದರಿ ಮಹಜರನ್ನು ನಿಪಿ.20 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.20 ಎ ಎಂದುಾ ಹಾಗೂ 2 ಪೋಟೋಗಳನ್ನು ನಿಪಿ.21 ಹಾಗೂ 22 ಎಂದು ಗುರುತಿಸಲಾಯಿತು.

ದಿ:03/10/2022 ರಂದು ಮೊಬೈಲ್ ಬಿಡುಗಡೆ ಮಹಜರ್ ಮಾಡಿದ್ದು ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಕೃತ್ಯಕ್ಕೆ ಸಂಬಂದಿಸಿದ ಸ್ಯಾಮ್ ಸಂಗ್ ನ ಕಪ್ಪು ಬಣ್ಣದ ಕಪ್ಪು ಬಣ್ಣದ ಮೊಬೈಲ್ ಅನ್ನು 7-15 ರಿಂದ 7-30 ರವೆಗೂ ಜರುಗಿಸಿದ್ದು ಮಹಜರನ್ನು ನಿಪಿ.23, ಸಾಕ್ಷಿಯ ಸಹಿಯನ್ನು ನಿಪಿ.23 ಎ ಹಾಗೂ ಪೋಟೋವನ್ನು ನಿಪಿ.24 ಎಂದು ಗುರುತಿಸಲಾಯಿತು.

ದಿ:03/10/2022 ರಂದು ಮಹಜರ್ ಕ್ರಮ ಜರುಗಿಸಿದ್ದು ಸ್ಯಾಮ್ ಸಂಗ್ ನ ನೀಲಿ ಬಣ್ಣದ ಮೊಬೈಲನ್ನು ಗಣೇಶ್ ಹಾಗೂ ಶಿವಕುಮಾರ್ ಅವರ ಸಮಕ್ಷಮ 8 ರಿಂದ 8-30 ರವರೆಗೂ ಮಹಜರ್ ಕ್ರಮ ಜರುಗಿಸಿ ಬಿಡುಗಡೆ ಮಾಡಿರುತ್ತೇನೆ. ಸದರಿ ಮಹಜರನ್ನು ನಿಪಿ.25 ಹಾಗೂ ನಿಪಿ.25 ಎ ಎಂದು , ಪೋಟೋವನ್ನು ನಿಪಿ.26 ಎಂದು ಗುರುತಿಸಲಾಯಿತು.

ಸ್ಯಾಮ್ ಸಂಗ್ ಮೊಬೈಲ್ ಅನ್ನು ಗಣೇಶ್ ಹಾಗೂ ಶಿವಕುಮಾರ್ ಅವರ ಸಮಕ್ಷಮ 8-40 ರಿಂದ 9 ರವರೆಗೂ ಜರುಗಿಸಿದ್ದು ಮಹಜರನ್ನು ನಿಪಿ.27 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.27 ಎ, ಪೋಟೋವನ್ನು ನಿಪಿ.28 ಎಂದು ಗುರುತಿಸಲಾಯಿತು.

ಸ್ಯಾಮ್ ಸಂಗ್ ಕಂಪನಿಯ ಕೀ ಪ್ಯಾಡ್ ಮಾಲೀಕರಾದ ಮಹಜರ್ ಸಾಕ್ಷಿಗಳ ಸಮಕ್ಷಮ 9 ರಿಂದ 9-20 ರವರೆಗೂ ಜರುಗಿಸಿ ಮಹಜರನ್ನು ನಿಪಿ.29 ಸಾಕ್ಷಿಯ ಸಹಿಯನ್ನು ನಿಪಿ.29 ಎ , ಹಾಗೂ ಪೋಟೋವನ್ನು ನಿಪಿ.30 ಎಂದು ಗುರುತಿಸಲಾಯಿತು.

ದಿ:036/10/2022 ರಂದು ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ ಕಪ್ಪು ಬಣ್ಣದ ಸ್ಮಾರ್ಟ್ ಪೋನನ್ನು ರಾತ್ರಿ 9 ರಿಂದ 9-20 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.31 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.31 ಎ ಎಂದು ಗುರುತಿಸಲಾಯಿತು.

ದಿ:03/10/2022 ರಂದು ಸ್ಯಾಮ್ ಸಂಗ್ ನೀಲಿ ಬಣ್ಣದ ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ 9-30 ರಿಂದ 9-50 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.32 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.32 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.33 ಎಂದು

ಗುರುತಿಸಲಾಯಿತು.

ದಿ:03/10/2022 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಒನ್ ಪ್ಲಸ್ ಕಂಪನಿ ಯ ಬಿಡುಗಡೆ ಮಹಜರನ್ನು ಜರುಗಿಸಿ 9-55 ರಿಂದ 10-15 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.34 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.34 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.35 ಎಂದು ಗುರುತಿಸಲಾಯಿತು.

ದಿ:03/10/2022 ರಂದು ಪ್ರಕರಣದ ವಿವೊ ಕಂಪನಿಯ ಸ್ಮಾರ್ಟ್ ಫೋನ್ ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ 10-30 ರಿಂದ 10-45 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.36 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.36 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.37 ಎಂದು ಗುರುತಿಸಲಾಯಿತು.

ದಿ:03/10/2022 ರಂದು ರೆಡ್ ಮೀ ಯ ಸ್ಮಾರ್ಟ್ ಮತ್ತು ಒನ್ ಪ್ಲಸ್ ಮೊಬೈಲ್ ಗಳನ್ನು ಬಿಡುಗಡೆ ಮಹಜರನ್ನು ಜರುಗಿಸಿ 10-50 ರಿಂದ 11-10 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.38 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.38 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.39 ಎಂದು ಗುರುತಿಸಲಾಯಿತು.

ದಿ:03/10/2022 ರಂದು ವಿವೋ ಕಂಪನಿಯ ಮೊಬೈಲ್ ಸ್ಮಾರ್ಟ ಫೋನ್ ಬಿಡುಗಡೆ ಮಹಜರನ್ನು ಜರುಗಿಸಿ 11-15 ರಿಂದ 11-35 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.40 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.40 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.41 ಎಂದು ಗುರುತಿಸಲಾಯಿತು.

ದಿ:03/10/2022 ರಂದು ಒನ್ ಪ್ಲಸ್ ನ ಸ್ಮಾರ್ಟ ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ 11-40 ರಿಂದ 12-00 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.42 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.42 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.43 ಎಂದು ಗುರುತಿಸಲಾಯಿತು.

ದಿ:04/10/2022 ರಂದು ವಿವೋ ಕಂಪನಿಯ ಮೊಬೈಲ್ ಸ್ಮಾರ್ಟ್ ಫೋನ್ ಬಿಡುಗಡೆ ಮಹಜರನ್ನು ಜರುಗಿಸಿ 12-05 ರಿಂದ 12-25 ರವರೆಗೂ ಶಿವಕುಮಾರ್ ಹಾಗೂ

ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.44 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.44 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.45 ಎಂದು ಗುರುತಿಸಲಾಯಿತು.

ದಿ:04/10/2022 ರಂದು ವಿವೋ ನ ಕಪ್ಪು ಬಣ್ಣದ ಸ್ಮಾರ್ಟ್ ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ 12-30. ರಿಂದ 12-50 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.46 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.46 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.47 ಎಂದು ಗುರುತಿಸಲಾಯಿತು.

ದಿ:21/10/2022 ರಂದು ಪ್ರಕರಣದ ಸ್ಯಾಮ್ ಸಂಗ್ ಜೆ 7 ವ್ಯೂ ಮೊಬೈಲ್ ಬಿಡುಗಡೆ ಮಹಜರನ್ನು ಕೆ ಎಸ್ ಜಯರಾಮು ಹಾಗೂ ರಾಮಚಂದ್ರ ಅವರ ಸಮಕ್ಷಮ 5 ರಿಂದ 5-20 ರವರೆಗೂ ಸದರಿ ಮಹಜರನ್ನು ನಿಪಿ.48 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.48 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.49 ಎಂದು ಗುರುತಿಸಲಾಯಿತು.

ದಿ:05/10/2022 ರಂದು ರೆಡ್ ಮಿ ಯ ಆಕಾಶ ನೀಲಿ ಬಣ್ಣದ ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ 7-40 ರಿಂದ 8-00 ರವರೆಗೂ ಸಂಪತ್ ಹಾಗಾ ಸುಮಂತ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.50 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.50 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.51 ಎಂದು ಗುರುತಿಸಲಾಯಿತು.

ದಿ:28/10/2022 ರಂದು ಜಯಪುರ ಪೋಲಿಸ್ ಠಾಣಾ ಆವರಣದಲ್ಲಿ ಪ್ರಕರಣದ ಸ್ಯಾಮ್ ಸಂಗ್ ಕಂಪನಿಯ ಸ್ಮಾರ್ಟ್ ಪೋನನ್ನು ಮಹಜರನ್ನು ಜರುಗಿಸಿ 10-00 ರಿಂದ 10-20 ರವರೆಗೂ ರಾಘವೇಂದ್ರ ಹಾಗೂ ರವಿ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.52 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.52 ಎ ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ.53 ಎಂದು ಗುರುತಿಸಲಾಯಿತು.

ದಿ:03/01/2023 ರಂದು ಜಯಪುರ ಪೋಲಿಸ್ ಠಾಣಾ ಆವರಣದಲ್ಲಿ ಪ್ರಕರಣದ ಕೆಎ-35 ಎನ್ 3948 ರ ನಂಬರಿನಮಾರುತಿ ಸುಜಕಿ ಸ್ವಿಪ್ಟ್ ಕಾರನ್ನು ಮಹಜರನ್ನು ಜರುಗಿಸಿ 7-30 ರಿಂದ 7-50 ರವರೆಗೂ ಸಂಪತ್ ಹಾಗೂ ಸುಮಂತ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.54 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.54 ಎ ಎಂದು ಗುರುತಿಸಲಾಯಿತು. 2 ಪೋಟೋಗಳನ್ನು ನಿಪಿ.55 ಹಾಗೂ 56 ಎಂದು

ಗುರುತಿಸಲಾಯಿತು.

ದೃಡೀಕರಣವನ್ನು ನಿಪಿ.57 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.57 ಎ ಎಂದು ಗುರುತಿಸಲಾಯಿತು.

ನಿಪಿ.6 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6 ಬಿ ಎಂದು ಗುರುತಿಸಲಾಯಿತು.

ಪ್ರ ವ ವರದಿಯನ್ನು ನಿಪಿ.58 ಸಾಕ್ಷಿಯ ಸಹಿಯನ್ನು ನಿಪಿ.58 ಎ ಎಂದು ಗುರುತಿಸಲಾಯಿತು.

ಪಂಚತಂತ್ರವನ್ನು ನಿಪಿ.59 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.59 ಎ ಎಂದು ಗುರುತಿಸಲಾಯಿತು.

ಮುದ್ದೆ ಮಾಲು 1 ರಿಂದ 3 ಅನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದಿರುವ 35 ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ **35** ನೇ ಆರೋಪಿ ಪರ ಶ್ರೀ ಹೆಚ್ ಎಸ್ ಎ., ವಕೀಲರವರಿಂದಃ</u>

ಚಾಸಾ1 ರವರು ವರದಿಯನ್ನು ಠಾಣೆಯಲ್ಲಿ ಬಂದು ತಯಾರಿಸಿರುತ್ತಾರೆ. ಚಾಸಾ 1 ರವರು ಮಹಜರನ್ನು ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ತಯಾರಿಸಿ ತಂದಿದ್ದರು. ಮುದ್ದೆ ಮಾಲಿನ ಹಣವನ್ನು ನಾನು ಎಣಿಸಿರುವುದಿಲ್ಲ. ವಶಕ್ಕೆ ಪಡೆಯಲಾಯಿತು ಎಂದು ಹೇಳಲಾದ ಹಣದ ಮುಖಬೆಲೆ ನನಗೆ ಗೊತ್ತಿಲ್ಲ ಎಂದರೆ ಸರಿ. ಅಮಾನತುಪಡಿಸಲಾಯಿತು ಎನ್ನಲಾದ ಹಣವನ್ನು ಮೊದಲೆ ಬಾಕ್ಸಿನಲ್ಲಿ ಹಾಕಿ ಸೀಲ್ ಮಾಡಿ ತರಲಾಗಿತ್ತು. ನನ್ನಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಸದರಿ ಹಣ ಬಾಕ್ಸಿನಲ್ಲಿದ್ದು ನಾನು ಎಣಿಕೆ ಮಾಡದೆ ಇರುವುದರಿಂದ ಇಷ್ಟೇ ಹಣ ಇತ್ತು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

ಪ್ರ ವ ವರದಿಯನ್ನು ದಾಖಲು ಮಾಡುವ ಪೂರ್ವದಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾನು ಭೇಟಿ ನೀಡಿರುವುದಿಲ್ಲ.

ಚಾಸಾ 1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಇಸ್ಪೀಟ್ ಎಲೆಗಳನ್ನು ನಗದ ಹಣ ಇದ್ದ ಬಾಕ್ಸಿನಲ್ಲಿ ಹಾಕಿ ಮುಚ್ಚಿದ್ದು ಅದನ್ನು ಹಾಜರುಪಡಿಸಿದ್ದರು.

ಬಾಕ್ಸಿನಲ್ಲಿ ಸದರಿ ಇಸ್ಪೀಟ್ ಎಲೆಗಳು ಮುಚ್ಚಿದ್ದರಿಂದ ಎಷ್ಟು ಎಲೆಗಳು ಇದ್ದವು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಪ್ಲಾಸ್ಟಿಕ್ ಡಬ್ಬಿಯಲ್ಲಿ ಮುದ್ದೆ ಮಾಲುಗಳು ಇದ್ದವು.

ನಿಪಿ.6 ರ ವರದಿಯಲ್ಲಿ ನಾನು ಸ್ವೀಕರಿಸಿದ ಬಗ್ಗೆ ನಮ್ಮ ಇಲಾಖೆಗೆ ಸಂಬಂಧಿಸಿದ ಯಾವುದೇ ಸೀಲು ಇರುವುದಿಲ್ಲ ಎಂದರೆ ಸರಿ.

ಚಾಸಾ 2 ರಿಂದ 11 ರವರ ಹೇಳಿಕೆಯನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 65 ಬಿ ರೀತ್ಯಾ ನಾನು ಯಾವುದೆ ದೃಢೀಕರಣವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪಿಡಿಒ ಅವರಿಂದ ನಾನು ಯಾವುದೆ ವರದಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿತರಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರ ವ ವರದಿಯನ್ನು ದಾಖಲಿಸಿದ ನಂತರವೂ ನಾನು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ ಎಂದರೆ ಸರಿ.

ನಾನು ಯಾವುದೇ ಸಮರ್ಪಕವಾದ ತನಿಖೆಯನ್ನು ಮಾಡದೇ ಚಾಸಾ 1 ರವರು ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ವಿರುದ್ಧ ಆರೋಪ ಸಾಬೀತಾಗದೆ ಇದ್ದರೂ ಸಹಾ ಸುಳ್ಳು ದೋಷಾರೋಪಣಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿತರು 35 ರ ಜನಗಳ ಪೈಕಿ ಯಾರು ಯಾರು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ಯಾವುದೇ ಸಮರ್ಪಕವಾದ ತನಿಖೆಯನ್ನು ಮಾಡದೇ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಉಳಿದ ಆರೋಪಿತರ ಪರ ಃ ವಕೀಲರುಗಳುಃ

**(35 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.)**

/9/

ಮರುವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಸಾಕ್ಷಿಯ ಸಹಿಃ ಪ್ರ.ದ.ನ್ಯಾ.ದಂಃ ಕೊಪ್ಪ.